ಒ.ಎಸ್.  - 69/2014

ಡಿ.ಡಬ್ಲ್ಯು. - 01

**ದಿನಾಂಕ     13-12 -2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯವರ ಪರ  ಶ್ರೀ ಪಿಎನ್.ಪಿ.ಕೆ.ಆರ್   ವಕೀಲರಿಂದಃ**

ವಾದಿ ನರಸಿಂಹ ನಾಯಕ್ ನನಗೆ ಪರಿಚಯಸ್ಥರಲ್ಲ .    ವಾದಿ ನರಸಿಂಹ ನಾಯಕ್ ಸಂತೆಕಟ್ಟೆ ಕಳತೂರು ಗ್ರಾಮ, ಉಡುಪಿ ಜಿಲ್ಲೆಯವರು. ವಾದಿ ನರಸಿಂಹ ನಾಯಕ್ ಸಿಂಡಿಕೇಟ್ ಬ್ಯಾಂಕ್ ಬಜಗೋಳಿಯಲ್ಲಿ ಕೆಲಸ ಮಾಡುತ್ತಾರೆ.  ನಾನು ವಾದಿ ನರಸಿಂಹ ನಾಯಕ್ ರವರನ್ನು ನಿಪಿ 1 ಕರಾರು ಆಗುವಾಗ ಮೊದಲ ಬಾರಿಗೆ ಭೇಟಿಯಾಗಿರುತ್ತೇನೆ. ಕರಾರು ಆಗುವ ದಿನವೇಅವರು ಸ್ವತ್ತಿನ ಬಗ್ಗೆ ಮಾತನಾಡಿ ಕರಾರು ಮಾಡಿಕೊಂಡಿರುತ್ತಾರೆ. ನಮ್ಮ ವ್ಯವಹಾರಕ್ಕೆ ಯಾವುದೇ ಮದ್ಯವರ್ತಿಗಳು ಇರುವುದಿಲ್ಲ . ಕರಾರು ಆಗುವ 3-4 ತಿಂಗಳ ಹಿಂದೆ ಆಸ್ತಿಯನ್ನು ಮಾರಾಟ ಮಾಡಬೇಕು ಎಂದು ಮತ್ತು ಮನೆಯವರಿಗೆ ಆರೋಗ್ಯ ಸರಿ ಇಲ್ಲದ ಕಾರಣ ಮತ್ತು ಮಗನಿಗೆ ಯಾವುದಾದರೂ  ವ್ಯವಹಾರ ಮಾಡಿಕೊಡಬೇಕು ಎಂದುಮಾರಾಟ ಮಾಡಲು ತೀರ್ಮಾನಿಸಿದ್ದೆವು . ನಾವು ವಾದಿಗೆ 52,00,000 ಕ್ಕೆ ಮಾರಾಟ ಮಾಡಲು ಒಪ್ಪಿದ್ದೆವು.  ವಾದಿ ನರಸಿಂಹ ನಾಯಕ್ ಮತ್ತು ನಾನು ಒಂದೇ ಊರಿನವರಲ್ಲ . ನಾನು ಇಂಡಿಯನ್ ಒವರ್ ಸೀಸ್  ಬ್ಯಾಂಕ್ ವರಂಗದಲ್ಲಿ ಕೆಲಸ ಮಾಡುತಿದ್ದೆ . ನಾನು ಬಿಕಾಂ ವರೆಗೆ ಒದಿದ್ದೇನೆ . ನಾನು ಬ್ಯಾಂಕ್ ನಲ್ಲಿ ಗುಮಾಸ್ತೆಯಾಗಿದ್ದೆ .

ವ್ಯಾಜ್ಯದ ಆಸ್ತಿಯ ಒಟ್ಟು ವಿಸ್ತೀರ್ಣ 14 ಸೆಂಟ್ಸ್. ವ್ಯಾಜ್ಯದ ಆಸ್ತಿಯಲ್ಲಿ 2 ಡೋರ್ ನಂಬರ್ ಗಳು ಇರುತ್ತದೆ . ದಾವಾ ಸ್ವತ್ತಿನಲ್ಲಿರುವ ಡೋರ್ ನಂಬರ್ ಸಂಖ್ಯೆ 9-104 ಇನ್ನೊಂದು ಡೋರ್ ನಂ 9-105  . ಡೋರ್ ನಂ 9-104 ರಲ್ಲಿ ಮೀನಾಕ್ಷಿ, 9-105 ರಲ್ಲಿ ಬಾಬು ಭಂಡಾರಿ ರವರ  ಸೆಲೂನು ಇತ್ತು. ಬಾಬು ಭಂಡಾರಿರವರು 10-15 ವರ್ಷಗಳ ಹಿಂದೆ ಸ್ವತ್ತುನ್ನು ಖಾಲಿ ಮಾಡಿ ಹೋಗಿರುತ್ತಾರೆ ಸಾಕ್ಷಿ ಮುಂದುವರಿದು ಕರಾರು ಆಗುವ ಸಮಯದಲ್ಲಿ ಬಾಬು ಭಂಡಾರಿ ಬಾಡಿಗೆದಾರನಾಗಿ ಸ್ವತ್ತಿನಲ್ಲಿ ಇರಲಿಲ್ಲ ಎಂದು ತಿಳಿಸಿರುತ್ತಾರೆ . ವಿಜಯ ಮತ್ತು ಸರೋಜಿನಿ ರವರು 9-3-104 ರಲ್ಲಿ ಇದ್ದರು ಅವರು 2018-19 ರಲ್ಲಿ ಖಾಲಿ ಮಾಡಿ ಹೋಗಿರುತ್ತಾರೆ. ದಾವಾ ಸ್ವತ್ತು  ನಮ್ಮ ತಂದೆ ಖರೀದಿ ಮಾಡಿದ ಮೂಲಗೇಣಿ ಆಸ್ತಿ . ಮೂಲ ದಣಿ ಯಾರು ಎಂದು ನನಗೆ ಗೊತ್ತಿಲ್ಲ . ನಿಪಿ 14 ರ ಪಹಣಿ ಪತ್ರಿಕೆಯಲ್ಲಿ ಕಾಣುವ ರಾಮಚಂದ್ರ ಬಲ್ಲಾಳ ಮತ್ತು ರಾಯ ಬಲ್ಲಾಳ ಮತ್ತು ಇತರರು ನಮ್ಮ ಮಾಲ ಧಣಿಗಳಾಗಿದ್ದು ಈಗ ಪಹಣಿಯಲ್ಲಿ ನನ್ನ ಹೆಸರು ದಾಖಲಾಗಿದೆ ಸಾಕ್ಷಿ ಮುಂದುವರಿದು ಎಸಿ ಮತ್ತು ಡಿಸಿ ರವರ ಆದೇಶದ ಮೇರೆಗೆ ನನ್ನ ಹೆಸರು  ಪಹಣಿಯಲ್ಲಿ ದಾಖಲಾಗಿದೆ . ದಾವಾ ಸ್ವತ್ತನ್ನು ಸರ್ವೆಯರ್ ಮುಖಾಂತರ ಅಳತೆ ಮಾಡಿದಾಗ ನಮಗೆ 18 ಸೆಂಟ್ಸ್ ಆಸ್ತಿ ಸಿಕ್ಕಿರುತ್ತದೆ . ಸರ್ವೆ ನಕಾಶೆ ನಮ್ಮ ಬಳಿ ಇದೆ . ದಾವಾ ಸ್ವತ್ತು ಮಾರಾಟ ಮಾಡಬೇಕಾದರೇ ದಾವಾ ಸ್ವತ್ತಿನಲ್ಲಿ 14 ಸೆಂಟ್ಸ್ ಮಾತ್ರ ಸಿಗುತ್ತದೆ ಎಂದರೆ ಸರಿ . ನನ್ನ ಮತ್ತು ವಾದಿಯರ ನಡುವೆ ಮಾತುಕತೆ ಆಗಿ ಜಾಗವನ್ನು ಕೊಡಬೇಕಾದರೇ ಅಳತೆ ಮಾಡಿ ಕೊಡಬೇಕು ಎಂದು ಮಾತುಕತೆ

ಆಗಿದೆ ಎಂದರೆ ಸರಿಯಲ್ಲ . ಕಟ್ಟಡ ಸಂಖ್ಯೆ 9-104 ರಲ್ಲಿ ವಿಜಯ ಮತ್ತು ಸರೋಜಿನಿ ವಾಸವಾಗಿದ್ದರು ಎಂದರೆ ಸರಿ . ನ್ಯಾಯಾಲಯದ ಆದೇಶವನ್ನು ಪಡೆದು ವಿಜಯ ಮತ್ತು ಸರೋಜಿನಿ ರವರನ್ನು ಕಟ್ಟಡದಿಂದ ಹೊರಹಾಕಬೇಕು ಎಂಬ ಉದ್ದೇಶವನ್ನು ನಾನು ಹೊಂದಿದ್ದೆ ಎಂದರೆ ಸರಿಯಲ್ಲ. ವಿಜಯ ಮತ್ತು ಸರೋಜಿನಿ ವಿರುದ್ಧ ನಾನು ಉಡುಪಿಯ ನ್ಯಾಯಾಲಯದಲಿ ದಾವೆಯನ್ನು ಹಾಕಿದ್ದೆ ಎಂದರೆ ಸರಿ . ನಿಪಿ-11 ನಾನು ಅಸಲು ದಾವಾ ಸಂಖ್ಯೆ 266/2008 ನ್ನು ನ್ಯಾಯಾಲಯದಲ್ಲಿ ವಿಜಯ ಮತ್ತು ಸರೋಜಿನಿ ವಿರುದ್ಧ ಹಾಕಿದ್ದ ದಾವೆಗೆ ಸಂಬಂಧಪಟ್ಟ ವಾದಪತ್ರ , ಆದೇಶಪುಟ ಮತ್ತು ಇತರೆ ದಾಖಲೆಗಳು ಎಂದರೆ ಸರಿ . 2008 ರಲ್ಲಿ ಪ್ರಾರಂಭವಾದ ದಾವೆ ನಂತರ 2017 ರಲ್ಲಿ ನನಗೆ ವಿಜಯ ಮತ್ತು ಸರೋಜಿನಿ ರವರಿಂದ ಸ್ವತ್ತಿನ ಸ್ವಾಧೀನ ಸಿಕ್ಕಿತು ಎಂದರೆ ಸರಿ. ನಿಪಿ-1 ಕರಾರಿನ 9 ನೇ ಷರತ್ತಿನಲ್ಲಿ ವಿಜಯ ಮತ್ತು ಸರೋಜಿನಿ ರವರ ವಿರುದ್ಧ ಹಾಕಿರುವ ದಾವೆಯ ಖರ್ಚು ವೆಚ್ಚಗಳನ್ನು ಅವರು ಖಾಲಿ ಮಾಡುವವರೆಗೆ ನಾನೇ ಭರಿಸಬೇಕು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಕರಾರು ಆಗುವಾಗ ವಿಜಯ ಮತ್ತು ಸರೋಜಿನಿ ವಿರುದ್ಧ ದಾವೆ ಇತ್ತು ಎಂದರೆ ಹೌದು . ವಿಜಯ ಮತ್ತು ಸರೋಜಿನಿಯನ್ನು ಖಾಲಿ ಮಾಡಿಸಿಕೊಡಿ ಎಂದು ಆಗಾಗೆ ವಾದಿ ನನಗೆ ಹೇಳುತಿದ್ದರು ಎಂದರೆ ಸರಿಯಲ್ಲ . ವಾದಿ ಅವರ ಕೈಯಿಂದ 70000 ಖರ್ಚು ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ವಿಜಯ ಮತ್ತು ಸರೋಜಿನಿಯನ್ನು ಸ್ವತ್ತಿನಿಂದ ಹೊರಹಾಕುವವರೆಗೆ ಎಷ್ಟು ಬಾರಿ ವಾದಿ ನಿಮ್ಮನ್ನು ಸಂಪರ್ಕಿಸಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಾದಿ ಎಂದೂ ಕೂಡ ಬರಲೇ ಇಲ್ಲ ಎಂದು ತಿಳಿಸಿರುತ್ತಾರೆ. ವಾದಿ ನಮ್ಮನ್ನು ಕರಾರು ಆದ ನಂತರ ಭೇಟಿ ಆಗಿಲ್ಲ . ನ್ಯಾಯಾಲಯದಲ್ಲಿ ವಿಜಯ ಮತ್ತು ಸರೋಜಿನಿವಿರುದ್ಧ ಇದ್ದ ದಾವೆಯ ಸಂದರ್ಭದಲ್ಲಿ ವಾದಿಯು ವಿಜಯ ಮತ್ತು ಸರೋಜಿನಿ ರವರಿಗೆ 25,00,000 ಕೊಟ್ಟು ದಾವಾ ಸ್ವತ್ತಿನಿಂದ ಹೊರಹೋಗುವಂತೆ ಕೇಳಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ವಾದಿ ವಿಜಯ ಮತ್ತು ಸರೋಜಿನಿ ರವರಿಗೆ ಹಣ ಕೊಟ್ಟು ದಾವಾ ಸ್ವತ್ತುನಿಂದ ಹೊರಹೋಗುವಂತೆ ಕೇಳಿಕೊಂಡಿದ್ದರೂ ಕೂಡ ವಾದಿಗೆ ನಾನು ಯಾವುದೇ ಸಹಕಾರ ನೀಡಲಿಲ್ಲ ಎದಂರೆ ಸಾಕ್ಷಿ ನ್ಯಾಯಾಲಯದಲ್ಲಿ ದಾವೆ ಇತ್ತು ನಾನು ನ್ಯಾಯಾಲಯದಿಂದಲೇ ಸ್ವಾಧೀನವನ್ನು ಪಡೆದೆ ಎಂದು ತಿಳಿಸಿರುತ್ತಾರೆ. ವಿಜಯ ಮತ್ತು ಸರೋಜಿನಿ ರವರನ್ನು ದಾವಾ ಸ್ವತ್ತಿನಿಂದ ನ್ಯಾಯಾಲಯದ ಆದೇಶದ ಮೇರೆಗೆ ಖಾಲಿ ಮಾಡಿಸಿದ ನಂತರ ವಾದಿಗೆ ಸ್ವತ್ತನ್ನು ಕ್ರಯ ಪತ್ರ ಮಾಡಿಕೊಟ್ಟಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಾದಿ ಬರಲೇ ಇಲ್ಲ ಎಂದು ತಿಳಿಸಿರುತ್ತಾರೆ . ಕರಾರು ಆದ ದಿನಾಂಕದಿಂದ ವಾದಿಗೆ ಕರೆದು ಮಾತನಾಡಿದ್ದಾಗಲೀ ಅಥವಾ ನೋಟಿಸು ಕೊಟ್ಟಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೊಟೀಸು ಕೊಟ್ಟಿದ್ದೇನೆ . 09-04-2009 ರಂದು ನಾನು ವಾದಿಗೆ ನೋಟಿಸು ಕೊಟ್ಟಿದ್ದೇನೆ . ನಾನು ನನ್ನ ಹೆಸರಿನಲ್ಲಿಯೇ ವಾದಿಗೆ ರಿಜಿಸ್ಟರ್ ನೋಟಿಸು ಕೊಟ್ಟಿದ್ದೇನೆ . ಕರಾರನ್ನು ಪೂರ್ಣಗೊಳಿಸಿ ಕೊಡಿ ಎಂದು ನಾನು ನೋಟಿಸು ಕೊಟ್ಟಿದ್ದೇನೆ . ನೋಟಿಸಿನ ಪ್ರತಿ ನನ್ನ ಬಳಿ ಇದೆ . ನಾನು ಕಳುಹಿಸಿದ ನೋಟಿಸು ವಾದಿಗೆ ಜಾರಿಯಾಗಿದೆ . ನಾನು ನೊಂದಣಿ ಅಂಚೆ ಮುಖೇನ ವಾದಿಗೆ ನೋಟಿಸು ಕೊಟ್ಟಿದ್ದೇನೆ . ವಾದಿಗೆ ಜಾರಿಯಾದ ಬಗ್ಗೆ ನನ್ನ ಬಳಿ ದಾಖಲೆ

ಇರುತ್ತದೆ . 11-04-2009 ರಂದು ನನಗೆ ಅಂಚೆ ಸ್ವೀಕೃತಿ ಬಂದಿರುತ್ತದೆ. ಮನೆಗೆ ಕಳುಹಿಸಿದ ನೋಟಿಸು ನನಗೆ ವಾಪಸ್ಸು ಬಂದಿರುತ್ತದೆ . ನಾನು ಕಳುಹಿಸಿದ ನೋಟಿಸಿಗೆ ವಾದಿ ಉತ್ತರ ಕೊಟ್ಟಿರುವುದಿಲ್ಲ . ತದನಂತರ ನಾನು ವಾದಿಯನ್ನು ವಿಚಾರಿಸಿಲಿಲ್ಲ . ವಿಜಯ ಮತ್ತು ಸರೋಜಿನಿ ರವರ ಕೇಸಿನಲ್ಲಿ ಖರ್ಚು ವೆಚ್ಚಗಳನ್ನು ನಾನೇ ಮಾಡಿರುತ್ತೇನೆ . ನ್ಯಾಯಾಲಯಕ್ಕೆ ಹಾಜರಾಗುವುದು ಮತ್ತು ವಕೀಲರನ್ನು ಭೇಟಿಯಾಗುವುದು ಕೂಡ ನಾನೇ ಮಾಡಿರುತ್ತೇನೆ . ನಾನು ಒಟ್ಟು ಎಷ್ಟು ಖರ್ಚು ಮಾಡಿರುತ್ತೇನೆ ಎಂದು ನೆನಪಿಲ್ಲ . ಕರಾರಿನ ಷರತ್ತಿನ ಪ್ರಕಾರ ನಾನೇ ವಿಜಯ ಮತ್ತು ಸರೋಜಿನಿಯನ್ನು ಖಾಲಿ ಮಾಡಿಸಬೇಕಾಗಿತ್ತು ಎಂದರೆ ಸರಿಯಲ್ಲ . ನ್ಯಾಯಾಲಯದಲ್ಲಿ ನಾನು ಸರಿಯಾಗಿ ಕೇಸು ನಡೆಸದೇ ವರ್ಷಗಟ್ಟಲೇ ವಿನಕಾರಣ ಮುಂದೂಡಲ್ಪಟ್ಟಿದೆ ಎದರೆ ಸರಿಯಲ್ಲ . ಕರಾರಿನ ಷರತ್ತಿನ ಪ್ರಕಾರ ನಿಮ್ಮ ಕರ್ತವ್ಯ ಮಾಡಿ ಎಂದು ವಾದಿಗೆ ವಕೀಲರ ಮುಖೇನ ನೋಟಿಸು ಕೊಟ್ಟಿಲ್ಲ . ನಾನು ಕರಾರನ್ನು ರದ್ದು ಪಡಿಸಿ ಎಂದು ದಾವೆಯನ್ನು ಹಾಕಿಲ್ಲ . ವಾದಿ ಕೊಟ್ಟ ಹಣವನ್ನು ವಾಪಸ್ಸು ಕೊಡುವ ಪ್ರಯತ್ನ ಮಾಡಿಲ್ಲ ಕಾರಣ ಅವರುಬಂದಿಲ್ಲ ಮತ್ತು ಕರಾರಿನಲ್ಲಿ ಮುಂಗಡ ಹಣವನ್ನು ವಾಪಾಸ್ಸು ಕೊಡುವ ಬಗ್ಗೆ ಉಲ್ಲೇಖ ಇಲ್ಲ ಎಂದು ತಿಳಿರುತ್ತಾರೆ . ವಾದಿ 1,00,000 ಮಾತ್ರ ಕೊಟ್ಟು ಉಳಿಕೆ 9,00,000 ಮುಂಗಡ ಹಣವನುನ 15 ದಿನದಲ್ಲಿ ಕೊಡುವುದಾಗಿ ಹೇಳಿ ಕೊಟ್ಟಿರುವುದಿಲ್ಲ . ನಾನು ವಾದಿಗೆ 2-3 ಬಾರಿ ಫೋನ್ ಮುಖೇನ ಸಂಪರ್ಕಿಸಿ ಮುಂಗಡ ಹಣದ ಬಾಕಿ ಕೊಡಿ ಎಂದು ಹೇಳಿದಾಗ ಈಗ ಹಣ ಇಲ್ಲ ಸಮಯ ಕೊಡಿ ಎಂದು ಹೇಳಿದರು . ನಾನು ಎಪ್ರಿಲ್ 2009 ರವರೆಗೆ ಹಣ ಕೊಡುತ್ತಾರೆ ಎಂದು ಕಾದಿದ್ದೆ ಅವರು ಕೊಡಲಿಲ್ಲ . ವಾದಿ 6 ತಿಂಗಳವರೆಗೆ ನನಗೆ ಉಳಿಕೆ 56,00,000 ಕೊಟ್ಟು ದಾವಾ ಸ್ವತ್ತು ನೊಂದಣಿ ಮಾಡಿಸಿಕೊಳ್ಳಲು ಬರಲಿಲ್ಲ . ಸದ್ರಿ ಷರತ್ತಿನ ಉಲ್ಲಂಘನೆ ಬಗ್ಗೆ ಮೇಲೆ ಹೇಳಿದ ರೀತಿ ನಾನು ವಾದಿಗೆ ನೋಟಿಸು ಕೊಟ್ಟಿದ್ದೆ. ವಾದಿಯೇ ವಿಜಯ ಮತ್ತು ಸರೋಜಿನಿರವರನ್ನು ಖಾಲಿ ಮಾಡಿಸಬೇಕಾಗಿದ್ದು ಆದರೇ ಅವರು ಖಾಲಿ ಮಾಡಿಸಲಿಲ್ಲ . ನಾನು ವಿಜಯ ಮತ್ತು ಸರೋಜಿನಿರವರನ್ನು ಭೇಟಿಯಾಗಿಲ್ಲ ಕಾರಣ ನ್ಯಾಯಾಲಯದಲ್ಲಿ ಪ್ರಕರಣ ಇತ್ತು. ನಿಡಿ 1 ಮತ್ತು 2 ಗಳನ್ನು ಕರಾರು ಆಗುವಾಗ ವಾದಿಯೇ ಸೆಕ್ಯೂರಿಟಿಗಾಗಿ ಕೊಟ್ಟಿದ್ದರು . ಕರಾರು ಆಗುವಾಗ ನಾನೇ ಒತ್ತಾಯ ಮಾಡಿ ನಿಡಿ-1 ಮತ್ತು 2 ಚೆಕ್ ನ್ನು ವಾದಿ ಮತ್ತು ಅವರ ಹೆಂಡತಿಯಿಂದ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ . ನಾನು ನಿಡಿ 1 ಮತ್ತು 2 ಚೆಕ್ ಗಳನ್ನು ಬ್ಯಾಂಕಿಗೆ ಹಾಜರುಪಡಿಸುವ ಉದ್ದೇಶ ಹೊಂದಿರಲಿಲ್ಲ . ನಿಪಿ 8 ನೋಟಿಸು ಮತ್ತು ನಿಪಿ 9 ಮತ್ತು 10 ಅಂಚೆ ಸ್ವೀಕೃತಿಗಳು ಎಂದರೆ ಸರಿ . ನಿಪಿ 8 ರಲ್ಲಿರುವ ಒಕ್ಕಣೆಯನ್ನು ನಾನು ಓದಿ ಅರ್ಥ ಮಾಡಿಕೊಂಡಿರುತ್ತೇನೆ . ನಿಪಿ 8 ರಲ್ಲಿ ನ್ಯಾಯಾಲಯದಲ್ಲಿ ವಿಜಯ ಮತ್ತು ಸರೋಜಿನಿಯನ್ನು ಖಾಲಿ ಮಾಡಿಸುವ ಪ್ರಕರಣ ಮುಂದೆ ಹೋಗುತ್ತದೆ ಆದ್ದರಿಂದ ಸದ್ರಿ ಪ್ರಕರಣ ಬಾಕಿ ಇರುವಾಗಲೇ ಖರೀದಿಸಲು ವಾದಿ ಸಿದ್ಧನಿದ್ದೇನೆ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ . ಸದ್ರಿ ನೋಟಿಸು ನನಗೆ ತಲುಪಿದ ನಂತರ ನಾನುವಕಿಲರ ಮುಖೇನಉತ್ತರ ಕೊಡಲು ತೊಂದರೆ ಇರಲಿಲ್ಲ . ನಾನು ವಾದಿಯಿಂದ ಹೆಚ್ಚಿನ ಹಣ ಪಡೆಯುವ ಉದ್ದೇಶದಿಂದ ವಿಜಯ ಮತ್ತು

ಸರೋಜಿನಿಯನ್ನು ಖಾಲಿ ಮಾಡಿಸಲಿಲ್ಲ ಮತ್ತು ವಾದಿಗೆ ಕ್ರಯಪತ್ರ ಬರೆದುಕೊಡಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಕರಾರು ಮಾಡಿದ ನಂತರ ನಾನು ಬೇರೆಯವರಿಗೆ ಮಾರಾಟ ಮಾಡುವ ಉದ್ದೇಶದಿಂದ ಬೇರೆಯವರಿಗೆ ಜಾಗ ತೋರಿಸುತಿದ್ದೆ ಎಂದರೆ ಸರಿಯಲ್ಲ . ಆದ್ದರಿಂದ ನಿಪಿ 8 ನೋಟಿಸಿಗೆ ಉತ್ತರ ಕೊಡಲಿಲ್ಲ ಎಂದರೆ ಸರಿಯಲ್ಲ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.